# ಮಹಾಬಲೇಶ್ವರ



## ಗಿರಿಕಂದರಗಳ ಹಸುರ ಹಂದರ

**ಹಸುರು ಗಿರಿಕಣಿವೆಗಳ ನಡುವೆ ಯಾನ ಮಾಡಬಯಸುವವರಿಗೆ ಮಹಾಬಲೇಶ್ವರ ಹೇಳಿಮಾಡಿಸಿದ ತಾಣ. ಬೆಟ್ಟಗುಡ್ಡಗಳಲ್ಲಿ ತಣ್ಣಗೆ ಹರಿವ ಝುರಿತೊರೆಗಳು, ಮಂಜು ಮೋಡಗಳೊಳಗೆ ಮರೆಯಾಗಿ ಮತ್ತೆ ಎದ್ದುನಿಲ್ಲುವ ಪರ್ವತಗಳ ಪ್ರಕೃತಿ ಸೋಜಿಗ ಕಾಣಬೇಕೆಂದರೆ ಇಲ್ಲಿಗೊಮ್ಮೆ ಭೇಟಿ ನೀಡಲೇಬೇಕು.**

■ **ಆರ್ಕೆ ಆಡುಕಳ**

ಬೆಂಗಳೂರಿನಿಂದ ಕಾರಿನಲ್ಲಿ ಹೋಗಬಹುದಾದ ಮತ್ತು ನಾಲ್ಕೈದು ದಿವಸ ಪ್ರಕೃತಿಯ ಮಡಿಲಲ್ಲಿ ನಿರಾಳವಾಗಿ ಇದ್ದು ಬರಬಹುದಾದ ಗಿರಿಧಾಮ ಮಹಾಬಲೇಶ್ವರ. ಬೆಂಗಳೂರಿನಿಂದ ತೀರ ಹತ್ತಿರವೂ ಅಲ್ಲದ, ತುಂಬಾ ದೂರವೂ ಅಲ್ಲದ, ಪುಣೆಗೆ ಸಮೀಪದ ಒಂದು ಅದ್ಭುತ ಅರಣ್ಯಧಾಮವಿದು.

ಬೆಂಗಳೂರಿನಿಂದ ಸುಮಾರು 790 ಕಿ.ಮೀ. ದೂರವಿರುವ ಮಹಾಬಲೇಶ್ವರ, ಮಹಾರಾಷ್ಟ್ರ ರಾಜ್ಯಕ್ಕೆ ಸೇರಿದೆ. ಪುಣೆಗೆ ವಿಮಾನದಲ್ಲಿ ಹೋಗಿ ಅಲ್ಲಿಂದಲೂ ಹೋಗಬಹುದು, ಬೆಂಗಳೂರಿನಿಂದ ನೇರ ಬಸ್ಸುಗಳೂ ಇವೆ. ಕಾರಿನಲ್ಲಿ ಹೋದರೆ ಸುಮಾರು 12 ಗಂಟೆಗಳ ಪ್ರಯಾಣ. ದೂರ ಪ್ರಯಾಣವಾದ್ದರಿಂದ ಬೆಳಿಗ್ಗೆ ನಾಲ್ಕಕ್ಕೇ ಬೆಂಗಳೂರು ಬಿಟ್ಟೆವು. ಬೆಂಗಳೂರು–ಪುಣೆ ಹೆದ್ದಾರಿ ಮೂಲಕ ಸತಾರ ತಲುಪಿದಾಗ, ಎಡಕ್ಕೆ ಸುಮಾರು 55 ಕಿ.ಮೀ. ದೂರ ಕ್ರಮಿಸಿದರೆ ಮಹಾಬಲೇಶ್ವರ ಸಿಗುತ್ತದೆ.

ಕಣ್ಣಿಗೆ ಹಸುರೇ ರಾಚುವಾಗ, ಅದಾಗಲೇ ಸುಮಾರು 10 ತಾಸು ಕಾರು ಓಡಿಸಿದ್ದರೂ ಪ್ರಕೃತಿ ಸೌಂದರ್ಯವನ್ನು ಸವಿಯುತ್ತಾ ಮಹಾಬಲೇಶ್ವರದ ಬೆಟ್ಟ ಹತ್ತುವಾಗ ದಣಿವೆನಿಸಲಿಲ್ಲ.

ಎಡಕ್ಕೆ, ಎತ್ತರೆತ್ತರ ಗಾಂಭೀರ್ಯದಿಂದ ನಿಂತಂತಿರುವ ಪಶ್ಚಿಮ ಘಟ್ಟಗಳ ಶ್ರೇಣಿ. ಬಲಕ್ಕೆ, ಭಯ ಹುಟ್ಟಿಸುವಂಥ ಕಂದಕ. ಇವುಗಳ ನಡುವೆ ಕಾರು ಓಡಿಸುವ ಮಜವೇ ಬೇರೆ. ಇಲ್ಲಿ ಕಾರು ಓಡಿಸುವಾಗ ಮೈಯೆಲ್ಲಾ ಕಣ್ಣಾಗಿರಬೇಕು. ದಾರಿ ಮಧ್ಯೆ ಬೋನಸ್‌ನಂತೆ ಚಿಕ್ಕಪುಟ್ಟ ಝುರಿಗಳು ಸಿಗುತ್ತವೆ. ಅವುಗಳನ್ನು ನೋಡುತ್ತಾ, ಆಡುತ್ತಾ ಹೋಟೆಲ್ ತಲುಪಿದಾಗ ಸಂಜೆ 4 ಗಂಟೆ. ಮಹಾಬಲೇಶ್ವರದಲ್ಲಿ ಬೇಗನೆ ಕತ್ತಲು ಆವರಿಸುವುದರಿಂದ ಅಂದು ಹೆಚ್ಚಿಗೆ ಏನೂ ನೋಡಲಾಗಲಿಲ್ಲ.

ಪರಿಸರ ಪ್ರೇಮಿಗಳಿಗೂ, ಹೊಸ ಜೋಡಿಗಳಿಗೂ ಹಾಗೂ ಕಡಿಮೆ ಬಜೆಟ್ಟಿನಲ್ಲಿ ವಾರಾಂತ್ಯ ಕಳೆಯಬೇಕೆನ್ನುವವರಿಗೂ ಮಹಾಬಲೇಶ್ವರ